4. ರೇಷ್ಮೆ ಕೃಷಿಕರಿಗೆ 10 ದಿನಗಳಿಗೊಮ್ಮೆ ಚೆಕ್ ಮೂಲಕ/ಬ್ಯಾಂಕ್ ಖಾತೆಗಳಿಗೆ ನೇರವಾಗಿ ಹಣ ಪಾವತಿಸಲು ಕ್ರಮವಹಿಸುವುದು.

5. 100 ಮೊಟ್ಟೆಗಳಿಗೆ ಕನಿಷ್ಟ 40 ಕೆ.ಜಿ. ಇಳುವರಿ ಪಡೆದಿರಬೇಕು. ವಿಫಲವಾದ ಬೆಳೆ, ಕರಗಿದ/ಜಲ್ಲಿ ಗೂಡುಗಳಿಗೆ ಸಂಕಷ್ಟ ಪರಿಹಾರ ಧನ ನೀಡಲಾಗುವುದಿಲ್ಲ.

ಕಾಳಿ ನದಿಯ ನೀರು

441 (932) ಶ್ರೀ ಸುನೀಲ್ ವಿ. ಹೆಗಡೆ (ಹಳಿಯಾಳ) :– ಮಾನ್ಯ ಜಲ ಸಂಪನ್ಮೂಲ ಸಚಿವರು ದಯಯಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:–

ಅ) ಉತ್ತರ ಕನ್ನಡ ಜಿಲ್ಲೆಯ ಹಳಿಯಾಳ ತಾಲ್ಲೂಕಿನಲ್ಲಿರುವ ಕಾಳಿ ನದಿಯಿಂದ ತಾಲ್ಲೂಕಿನ ಎಲ್ಲಾ ಕೆರೆಗಳಿಗೆ ನೀರನ್ನು ತುಂಬಿಸಿ ಸುಮಾರು 10 ರಿಂದ 12 ಸಾವಿರ ಎಕರೆ ಜಮೀನಿಗೆ ನೀರನ್ನು ಒದಗಿಸಿ ರೈತರಿಗೆ ಅನುಕೂಲ ಮಾಡಲು ಮನವಿ ಸಲ್ಲಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

ಆ) ಹಾಗಿದ್ದಲ್ಲಿ, ಈ ಬಗ್ಗೆ ಸರ್ಕಾರ ಕೈಗೊಂಡ ಕ್ರಮಗಳೇನು ;

ಇ) ಕಾಳಿ ನದಿಯಿಂದ ನೀರನ್ನು ಕೆರೆಗಳಿಗೆ ತುಂಬಿಸಿ ರೈತರ ಜಮೀನನ್ನು ನೀರಾವರಿ ಜಮೀನಾಗಿ ಯಾವಾಗ ಮಾರ್ಪಡಿಸಲಾಗುವುದು (ಮಾಹಿತಿ ನೀಡುವುದು)?

ಶ್ರೀ ಬಸವರಾಜ ಬೊಮ್ಮಾಯಿ (ಮಾನ್ಯ ಜಲ ಸಂಪನ್ಮೂಲ ಸಚಿವರು):–

ಅ) ಕಾಳಿ ನದಿಯಿಂದ ಉತ್ತರ ಕನ್ನಡ ಜಿಲ್ಲೆಯ ಹಳಿಯಾಳ ತಾಲ್ಲೂಕಿನ ಕೆರೆಗಳಿಗೆ ನೀರನ್ನು ತುಂಬಿಸುವ ಕುರಿತು ಪ್ರಸ್ತಾವನೆಯನ್ನು ಸಣ್ಣ ನೀರಾವರಿ ಇಲಾಖೆಯಿಂದ ಜಲ ಸಂಪನ್ಮೂಲ ಇಲಾಖೆಗೆ ಹಸ್ತಾಂತರಿಸುವಂತೆ ಕೋರಿಕೆಯು ಬಂದ ಮೇರೆಗೆ ಸಣ್ಣ ನೀರಾವರಿ ಇಲಾಖೆಯ ಅಭಿಪ್ರಾಯವನ್ನು ತಿಳಿಸುವಂತೆ ಕೋರಲಾಗಿ, ಸಣ್ಣ ನೀರಾವರಿ ಇಲಾಖೆಯು ದಿನಾಂಕ : 31–10–2011 ರಂದು ಕಾಳಿ ನದಿಯಿಂದ ಉತ್ತರ ಕನ್ನಡ ಜಿಲ್ಲೆಯ ಹಳಿಯಾಳ ತಾಲ್ಲೂಕಿನ ಕೆರೆಗಳಿಗೆ ನೀರನ್ನು ತುಂಬಿಸುವ ಯೋಜನೆಗಳನ್ನು ಜಲ ಸಂಪನ್ಮೂಲ ಇಲಾಖೆಯಿಂದ ಕೈಗೊಳ್ಳಲು ಸಹಮತಿ ನೀಡಿದ್ದು, ಈ ಬಗ್ಗೆ ಮುಂದಿನ ಕ್ರಮ ಪರಿಶೀಲನೆಯಲ್ಲಿದೆ.

ಕುಣಬಿ ಗೌಳಿ ಮತ್ತು ಮರಾಠಿ ಜನಾಂಗಕ್ಕೆ ಮೂಲಭೂತ ಸೌಕರ್ಯ

442 (933) ಶ್ರೀ ಸುನೀಲ್ ವಿ. ಹೆಗಡೆ (ಹಳಿಯಾಳ) :– ಮಾನ್ಯ ಅರಣ್ಯ ಸಚಿವರು ದಯಯಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:–

ಅ) ಜೋಯಡಾ ತಾಲ್ಲೂಕು ಶೇ. 87 ರಷ್ಟು ಕಾಡಿನಿಂದ ಆವೃತ್ತಗೊಂಡಿದ್ದು, ವನ್ಯಜೀವಿ ವಿಭಾಗ, ಹುಲಿ ಸಂರಕ್ಷಣಾ ವಿಭಾಗ ಹಾಗೂ ಅಣಶಿ ರಾಷ್ಟ್ರೀಯ ಉದ್ಯಾನವನಗಳಾದ ಈ 3 ಯೋಜನೆಗಳನ್ನು ರೂಪಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

ಆ) ಹಾಗಿದ್ದಲ್ಲಿ, ಈ ಯೋಜನೆಗಳಿಂದಾಗಿ ಕಾಡಿನಲ್ಲಿ ವಾಸಿಸುತ್ತಿರುವ ಬುಡಕಟ್ಟು ಜನಾಂಗವಾದ ಕುಣಬಿ, ಗೌಳಿ ಮತ್ತು ಮರಾಠಿ ಇವರುಗಳು ಆರೋಗ್ಯ/ಶಿಕ್ಷಣ ಮತ್ತು ವಿದ್ಯುತ್ ಇತರೆ ಮೂಲಭೂತ ಸೌಲಭ್ಯಗಳಿಂದ ವಂಚಿತರಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

ಇ) ಅರಣ್ಯ ಇಲಾಖೆಯ ನೀತಿಯಿಂದ ಇಲ್ಲಿ ಕೈಗೊಳ್ಳುವಂತಹ ರಸ್ತೆ ಮತ್ತು ವಿದ್ಯುತ್ ಕಾಮಗಾರಿಗಳನ್ನು ಕಾರ್ಯಗತಗೊಳಿಸಲು ತೊಂದರೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

ಈ) ಅಗತ್ಯ ಮೂಲಭೂತ ಸೌಕರ್ಯ ಒದಗಿಸಲು ಸರ್ಕಾರ ಸೂಕ್ತವಾದ ಕ್ರಮವನ್ನು ತೆಗೆದುಕೊಳ್ಳಲಾಗುವುದೇ (ಮಾಹಿತಿ ನೀಡುವುದು) ?

ಶ್ರೀ ಸಿ.ಪಿ. ಯೋಗೇಶ್ವರ್ (ಮಾನ್ಯ ಅರಣ್ಯ ಸಚಿವರು):–

ಅ) ಜೋಯಿಡಾ ತಾಲ್ಲೂಕನ ಕೆಲವು ಭಾಗ ದಾಂಡೇಲಿ – ಅಣಶಿ ರಾಷ್ಟ್ರೀಯ ಉದ್ಯಾನವನ ಎಂದು ಘೋಷಣೆಯಾಗಿದೆ.

ಆ) ದಾಂಡೇಲಿ ವನ್ಯಜೀವಿ ವಿಭಾಗದಲ್ಲಿ ವಾಸಿಸುತ್ತಿರುವ ಬುಡಕಟ್ಟು ಜನಾಂಗವಾದ ಕುಣಬಿ, ಗೌಳಿ ಇನ್ನಿತರರಿಗೆ ಆರೋಗ್ಯ ಮತ್ತು ಶಿಕ್ಷಣ, ವಿದ್ಯುತ್ ಮತ್ತು ಇತರೆ ಮೂಲಭೂತ ಸೌಲಭ್ಯಗಳನ್ನು ಒದಗಿಸುವುದು ಅರಣ್ಯ ಇಲಾಖೆಗೆ ಸಂಬಂಧಿಸಿರುವುದಿಲ್ಲ.

ಇ) ದಾಂಡೇಲಿ ವನ್ಯಜೀವಿ ವಿಭಾಗ ರಾಷ್ಟ್ರೀಯ ಉದ್ಯಾನವನದೆಂದು ಘೋಷಣೆಯಾಗಿದ್ದರಿಂದ ಇಲ್ಲಿ ಕೈಗೊಳ್ಳುವಂತಹ ರಸ್ತೆ, ವಿದ್ಯುತ್ ಕಾಮಗಾರಿಗಳನ್ನು ಕಾರ್ಯಗತಗೊಳಿಸಲು ಕೇಂದ್ರ ಸರ್ಕಾರದ ಅನುಮೋದನೆ ಬೇಕಾಗುತ್ತದೆ. ಇದು ಸರ್ಕಾರದ ಗಮನಕ್ಕೆ ಬಂದಿದೆ.

ಈ) ದಾಂಡೇಲಿ ವನ್ಯಜೀವಿ ಅರಣ್ಯ ಪ್ರದೇಶದಲ್ಲಿ ವಾಸಿಸುತ್ತಿರುವ ಜನರಿಗೆ ಮೂಲ ಸೌಕರ್ಯ ಕುರಿತು ಕೇಂದ್ರ ಸರ್ಕಾರದ ಅನುಮೋದನೆ ಪಡೆಯಲು ಕ್ರಮ ತೆಗೆದುಕೊಳ್ಳಲಾಗುವುದು.